


**ಪತ್ರಕರ್ತ:** ಸುದೀರ್ಘ ವಿಚಾರಣೆ ನಂತರ ಅವರನ್ನು ಆರೋಪಮುಕ್ತ ಮಾಡಿರುವ ಗುಟ್ಟೇನು ಸಾರ್?
**ಅಧಿಕಾರಿ:** ಇನ್ನುಮುಂದೆ ನಾವು ಹೇಳಿದಂತೆ ಕೇಳುವುದಾಗಿ ಒಪ್ಪಿಕೊಂಡಿದ್ದಾನೆ. ಹಂಗಾಗಿ ಆರೋಪಮುಕ್ತ ಅಂತ ಘೋಷಣೆ ಮಾಡಿದ್ದೀವಿ.

**ನಂಜ:** ನಾನು ಶಿಳ್ಳೆ ಹೊಡೆದರೆ ನೂರಾರು ಜನ ನನ್ನ ಹಿಂದೆ ಬಂದು ನಿಲ್ತಾರೆ.
**ಮಂಜ:** ನಿಂದೇನ್ ಮಹಾ ಬಿಡು. ನನ್ ಹೆಸರಲ್ಲಿ ಸಾವಿರಾರು ಜನ ಇದಾರೆ ಗೊತ್ತಾ?
**ನಂಜ:** ಹೌದಾ ಎಲ್ಲಿದ್ದಾರೆ?
**ಮಂಜ:** ಮಂಜ ಅಂತ ಹೆಸರಿಟ್ಟುಕೊಂಡವರು ಈ ದೇಶದಲ್ಲಿ ಎಷ್ಟು ಜನ ಇಲ್ಲ ಹೇಳು.



ಉಚಿತಗಳೇ ಚುನಾವಣೆಯಲ್ಲಿ ಗೆಲ್ಲಿಸುವ ಕಾಲ ಬಂದಿರುವಾಗ, ಪಾದಯಾತ್ರೆ ಅನುಚಿತ!

**ಶಿಷ್ಯ:** 'ಸತ್ತ ಮೇಲೆ ನನ್ನ ಶರೀರವನ್ನು ಸುಡಬೇಡಿ, ಮಣ್ಣು ಮಾಡಿ' ಅಂತ ಬರೆದಿಟ್ಟಿರುವ ಗುಟ್ಟೇನು ಗುರುಗಳೇ?
**ಗುರು:** ಸಾಮ್ರಾಣಿ ಕಡ್ಡಿ ಬೆಂಕಿ ಸೋಕಿದ್ರೇನೇ ನನ್ನಿಂದ ತಡೆದುಕೊಳ್ಳಕ್ಕಾಗಲ್ಲ... ಅಂತಾದ್ರಲ್ಲಿ ಬೆಂಕಿ ಇಟ್ರೆ ತಡೆದುಕೊಳ್ಳಕ್ಕಾಗುತ್ತಾ?

**ಮೇಷ್ಟ್ರು:** ಪ್ರೀತಿಯ ವಿದ್ಯಾರ್ಥಿಗಳೇ, ಚೆನ್ನಾಗಿ ಓದಿ, ಜೀವನದಲ್ಲಿ ಒಳ್ಳೆಯ ಹೆಸರು ತೆಗೆದುಕೊಳ್ಳಿ.
**ಓರ್ವ ವಿದ್ಯಾರ್ಥಿ:** ಹಾಗಾದ್ರೆ ಐದಾರು ಒಳ್ಳೆಯ ಹೆಸರುಗಳನ್ನು ಹೇಳಿ ಸಾರ್. ಅವುಗಳನ್ನೇ ಚೆನ್ನಾಗಿ ಓದಿಕೊಳ್ಳುತ್ತೇವೆ.

ನಂಜನಿಗೆ ಕಾದಂಬರಿಕಾರ ಮಂಜನನ್ನ ಭೇಟಿ ಮಾಡುವ ಸುಯೋಗ ಒದಗಿಬಂತು.
**ನಂಜ:** ಸಾರ್, ನೀವು ಹದಿನಾಲ್ಕು ಕಾದಂಬರಿಗಳನ್ನು ಹೇಗೆ ಬರೆದ್ರಿ?
**ಮಂಜ:** ಅದೇನ್ ಬಿಡಪ್ಪ... ಮನಸ್ಸು ಮಾಡಿದ್ರೆ ನೀನೂ ಬರಿಯಬಹುದು.
**ನಂಜ:** ಹೇಳೋದು ಸುಲಭ ಸಾರ್.
**ಮಂಜ:** ಇಂಟರ್‌ನೆಟ್‌ನಿಂದ ಕಾಪಿ ಪೇಸ್ಟ್ ಮಾಡಲು ನನಗೇನು ಕಷ್ಟ ಅನಿಸಲಿಲ್ಲ.

**ನಂಜ:** ಲೋ ಮಂಜ, ಸಾಲ ಮಾಡಿಯಾದರೂ ತುಪ್ಪ ತಿನ್ನು ಅಂತ ಚಾರ್ವಾಕ ಯಾಕೆ ಹೇಳಿರಬಹುದು?
**ಮಂಜ:** ತುಪ್ಪ ಖರ್ಚಾಗಲೆಂದು.

**ಶ್ವೇತಾ:** ಲತಾ, ನೀನು ಎಸ್ಸೆಸೆಲ್ಸಿಯಲ್ಲಿ ಫಸ್ಟ್‌ಕ್ಲಾಸ್‌ನಲ್ಲಿ ಪಾಸ್ ಆದವಳು. ಸೆಕೆಂಡ್ ಪಿಯುಸಿಯಲ್ಲಿ ಯಾಕೆ ಫೇಲಾದೆ?
**ಲತಾ:** ಪಿಯುಸಿಯಲ್ಲಿ ಫೇಲಾದರೆ ಮದುವೆ ಮಾಡಿಸ್ತೀನಿ ಅಂತ ನಮ್ಮಪ್ಪ ಹೇಳ್ತಿದ್ರು. ಅದಕ್ಕೆ, ಬೇಕು ಅಂತಾನೆ ಫೇಲಾದೆ.

**ನಂಜ:** ಗಂಡು, ಮದುವೆ ಆಗಿದ್ದಾನೆ ಅಂದ್ರೆ ಏನರ್ಥ?
**ಮಂಜ:** ಹೆಣ್ಣಿನ ಕೈಲಿ ಸಿಲುಕಿದ್ದಾನೆ ಅಂತರ್ಥ.

ಸಂಗ್ರಹ: ಮಲ್ಲಿಕಾರ್ಜುನ ಸುರಧೇನುಪುರ